ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ೨ ವಿಧೇಯಕಕ್ಕೆ ಸೇರಿಸಲ್ಪಟ್ಟಿತು

ಖಂಡ ೧ ಇತ್ಯಾದಿ

ಅಧ್ಯಕ್ಷರು.—ಮೊದಲನೆಯ ಖಂಡ ಧೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮವು ಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ಧೀರ್ಘಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾಪ ಅಂಗೀಕಾರ

ಶ್ರೀ ಎ. ಲಕ್ಷ್ಮೀಸಾಗರ್.—ಕರ್ನಾಟಕ ಸಂಘಗಳ ನೋಂದಣಿ (ತಿದ್ದುಪಡಿ) ವಿಧೇಯಕ ೧೯೮೬ನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು.—ಪ್ರಸ್ತಾಪ ಏನೆಂದರೆ '' ಕರ್ನಾಟಕ ಸಂಘಗಳ ನೋಂದಣಿ(ತಿದ್ದುಪಡಿ)ವಿಧೇಯಕ, ೧೯೮೬ನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

ಕರ್ನಾಟಕ ಸಹಕಾರಿ ಬಟ್ಟೆ ಗಿರಣಿಗಳ[ಅರ್ಜನೆ ಮತ್ತು ವರ್ಗಾವಣೆ]ವಿಧೇಯಕ, ೧೯೮೬

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎ. ಲಕ್ಷ್ಮೀಸಾಗರ್(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—ಮಾನ್ಯ ಅಧ್ಯಕ್ಷರೇ, ಶ್ರೀ ಜೆ.ಹೆಚ್. ಪಟೇಲ್(ವಾಣಿಜ್ಯ ಕೈಗಾರಿಕೆ ಮತ್ತು ವಿದ್ಯುತ್ ಮಂತ್ರಿಗಳು).—ಅವರ ಪರವಾಗಿ

'' ಕರ್ನಾಟಕ ಸಹಕಾರಿ ಬಟ್ಟೆ ಗಿರಣಿಗಳ(ಅರ್ಜನೆ ಮತ್ತು ವರ್ಗಾವಣೆ)ವಿಧೇಯಕ, ೧೯೮೬ನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ. ''

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಕೆ.ಹೆಚ್. ಪಾಟೀಲ್.—ಮಾನ್ಯ ಸಭಾ ಅಧ್ಯಕ್ಷರೇ, ಇವತ್ತಿನ ದಿವಸ ಕರ್ನಾಟಕ ಸಹಕಾರಿ ಬಟ್ಟೆಗಿರಣಿಗಳ ವಿಧೇಯಕ ಎಂದು ಇದಕ್ಕೆ ಹೆಸರು ಇಟ್ಟು ಸಭೆಯಲ್ಲಿ ಮಂಡನೆ ಮಾಡಿದ್ದಾರೆ, ಆದರೆ ಇದು ಬಟ್ಟೆ ಗಿರಣಿಗಳ ವಿಧೇಯಕ ಅಲ್ಲ, ಬಟ್ಟೆಗಿರಣಿಗಳನ್ನು ಕೊಲ್ಲುವ ವಿಧೇಯಕವೆಂದು ನಾನು ಹೇಳುತ್ತೇನೆ, ಇದನ್ನು ನಾವು ಸ್ವಾಗತಮಾಡುವುದಾದರೂ ಹೇಗೆ ಅಧ್ಯಕ್ಷರೆ ? ಸಹಕಾರ ಸಂಘಗಳು ರಚಿತವಾದ ಮೇಲೆ ಅದರಲ್ಲಿ ಹಲವಾರು ಲೋಪದೋಷಗಳು ಇರಬಹುದು. ಆದರೆ ಸರ್ಕಾರದಲ್ಲೇ ಲೋಪಇತ್ತು ಬೇಕಾದವರ ಕೈಯಲ್ಲಿ ಈ ಗಿರಣಿಯನ್ನು ಕೊಡುವುದರ ಸಲುವಾಗಿ, ಈಗ ಇದನ್ನು ಇದರೊಳಗೆ ತಳ್ಳಿ ಸಹಕಾರಿ ಸಂಘದ ಆಸ್ತಿತ್ವದ ಮೇಲೆ ಗೂಬೆ ಹೊರಿಸುವುದಕ್ಕೆ ಈ ಮೂಲಕ ಹೊರಟಿದ್ದಾರೆ. ಮಾನ್ಯ ಜಾಲಪ್ಪನವರು ಉತ್ತಮವಾಗಿ ಕಾರ್ಯ ಮಾಡುತ್ತಿದ್ದವರು ಇದರಲ್ಲಿ ಅವರು ಏಕೆ ಕೈಹಾಕಲಿಲ್ಲ ? ಜೆ. ಹೆಚ್. ಪಟೇಲರ ಪ್ರಭಾವ ಹೆಚ್ಚಾಯಿತೆಂದು ಜಾಲಪ್ಪನವರು ಮಾಡಲಿಲ್ಲಪ್ಪೋ ಅಥವಾ ಬೊಮ್ಮಾಯಿಯವರ ವಶೀಲಿ ಹೆಚ್ಚಾಯಿತೋ ? ಏಕೆಂದರೆ ಮಹಾರಾಷ್ಟ್ರದಲ್ಲೂ ಅನೇಕ ಸಹಕಾರ ಸಂಘಗಳು ಬಂದ್ ಆಗಿವೆ. ಆದರೆ ಅವುಗಳನ್ನು ಆಲ್ ಇಂಡಿಯಾ ಮಿಲ್ ಫೆಡರೇಷನ್‌ನವರು ಓಡಿಸುತ್ತಾ

ಇದ್ದಾರೆ. ಆಲ್ ಇಂಡಿಯಾ ಮಿಲ್ ಫೆಡರೇಷನ್ನಿನಲ್ಲಿ ನಾನು ಸಹ ಒಬ್ಬ ಪ್ರೆಸಿಡೆಂಟ್ ಇದ್ದೇನೆ. ಕರ್ನಾಟಕ ರಾಜ್ಯ ಸರ್ಕಾರದವರು ಇದಕ್ಕೆ ಏನು ಖರ್ಚು ಮಾಡುತ್ತಿದ್ದಾರೆ. ಆದರೆ ಒಂದನೇ ಹತ್ತು ಅಂಶವನ್ನು ಕೊಟ್ಟರೆ ಇದನ್ನು ಉತ್ತಮವಾಗಿ ನಡೆಸುವುದಕ್ಕೆ ನಾವು ತಯಾರಾಗಿದ್ದೇವೆ. ಯಾವುದರ ಸಲುವಾಗಿ ಇದನ್ನು ಮಾಡಲಿಲ್ಲ ? ಈಗ ಇದನ್ನು ಈ ವಿಧೇಯಕದ ಮೂಲಕ ತನ್ನ ವಶಕ್ಕೆ ಸರ್ಕಾರ ತೆಗೆದುಕೊಂಡು, ಈಗಾಗಲೇ ೫೨ ಇಂಡಸ್ಟ್ರೀಗಳಲ್ಲಿ ೨೮ ಹಾಳಾಗಿ ಹೋಗಿರುವಾಗ, ಇಂತಹ ಆಯೋಗ್ಯ ಜನರಕೈಗೆ ಇದನ್ನು ಕೊಟ್ಟರೆ ಇನ್ನೇನು ಆಗಬಹುದು? ಏನು ಕಾರಣವೋ ಏನೋ ಮಾನ್ಯ ಸಹಕಾರ ಸಚಿವರು ಇದರಲ್ಲಿ ಕೈಹಾಕಲಿಲ್ಲ. ಈಗ ಅಸಿಟೇಟ್ ಫ್ಯಾಕ್ಟರಿ ಲುಕ್ಸಾನಿನಲ್ಲಿ ನಡೆಯುತ್ತಿದೆ. ಎನ್. ಜಿ. ಇ. ಎಫ್ ಕೂಡ ಅಷ್ಟೆ. ಭದ್ರಾವತಿಯ ವಿಶ್ವೇಶರಯ್ಯ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆಯನ್ನು ಬೇರೆಯವರಿಗೆ ಕೊಡಲಿಕ್ಕೆ ಹೊರಟಿದ್ದಾರೆ. ಮಾನ್ಯ ಅಧ್ಯಕ್ಷರೇ, ತಾವು ಕೂಡ ಒಬ್ಬ ಸಹಕಾರಿಗಳು ಇದ್ದೀರಿ. ಈ ಮಿಲ್ಲಿನ ಒಳಗೂ ಮತ್ತು ಹೊರಗೂ ತಾವು ಬಲ್ಲಿರಿ. ಇದರಲ್ಲಿ ಈಗ ಜೆ.ಹೆಚ್. ಪಟೇಲರಿಗೆ ಬಲ ಇದೆ, ಮೆಜಾರಿಟಿ ಇದೆ ಎಂದು ಕಾನೂನು ಮಾಡಬಹುದು. ಆದರೆ ಈ ಕಾನೂನಿನ ಸದುಪಯೋಗ ಮಾತ್ರ ಆಗುವುದಿಲ್ಲವೆಂದು ನಾನು ಹೇಳುತ್ತೇನೆ. ಸರ್ಕಾರ ದುರ್ವಿನಿಯೋಗ ಮಾಡುವುದಕ್ಕೆ ಈ ಕಾರ್ಖಾನೆಯನ್ನು ಬಂದ್ ಮಾಡಿದಿರಿ ಎನ್ನುವಂಥ ಅಪಾದನೆ ಅತೀ ತೀವ್ರದಲ್ಲಿ ತಮಗೆ ಬರುತ್ತದೆ, ಇಲ್ಲಿ ಉತ್ತಮವಾದ ಯಂತ್ರಗಳಿವೆ. ಇವುಗಳನ್ನು ರೀಕಂಡೀಷನ್ ಮಾಡಿದರೆ ಐ.ಎಫ್.ಸಿ.ಐ. ಐ.ಡಿ.ಬಿ.ಐ. ಅಥವಾ ಎನ್.ಡಿ.ಸಿ. ಯಿಂದ ಸಾಲ ಸಿಗುತ್ತದೆ. ನಮ್ಮವರದೇ ಆದ ಸಹಕಾರ ಸಂಘಗಳಿವೆ. ಹೆಚ್ಚೇಕೆ, ನಿಮ್ಮ ಪಕ್ಷದವರೇ ಆದ ಸಿದ್ದನಗೌಡರು ಸಹಕಾರ ಮಿಲ್ ಅನ್ನು ರಿಜಿಸ್ಟರ್ ಮಾಡಿದ್ದಾರೆ. ಶೇರು ಹಣ ಹತ್ತು ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೀರಿ. ಕೊಡಲಿ, ನಾನುಬೇಡ ಎನ್ನುವುದಿಲ್ಲ.ಅವರಿಗೆ ಇದನ್ನು ವರ್ಗಮಾಡಿಕೊಡಿರಿ. ನಂತರಸಾಲಕ್ಕಾಗಿ ಎಐಎಫ್ ಸಿಐ ಎನ್ಸಿಡಿಸಿಗೆ ರೆಕ್‌ಮಂಡ್ ಮಾಡಿದರೆ ಸಾಲಕೊಡುತ್ತಾರೆ. ಆದೂ ಇಲ್ಲದಿದ್ದರೆ, ಶ್ರೀ ಯಾವಗಲ್ ಅವರು ಸೊಸೈಟಿಯನ್ನು ರಿಜಿಸ್ಟರ್ ಮಾಡಿದ್ದಾರೆ. ಅವರಿಗಾದರೂ ಕೊಡಬಹುದು. ನಮ್ಮ ಪಾರ್ಟಿಯವರಿಗೆ ಕೊಡುವುದಿಲ್ಲ, ಆ ಮಾತು ಬೇರೆ. ನಾನು ಹೇಳುವುದೇನೆಂದರೆ, ನಿಮ್ಮ ಪಾರ್ಟಿಯಲ್ಲೇ ಯಾರು ಯಾರು ಇದ್ದಾರೆ, ಅವರಿಗೆ ಈ ಸಂಸ್ಥೆಗಳನ್ನು ಕೊಡಿರಿ ಅದು ಬಿಟ್ಟು ನಾನು ಶ್ರೀ ಕೋಳಿವಾಡರಿಗೆ ಕೊಡಿ ಎಂದರೆ ನೀವು ಕೊಡುವುದಿಲ್ಲ, ಮಾನ್ಯ ಅಧ್ಯಕ್ಷರೇ, ಈ ಮಿಲ್ಲು ಹೇಗಿದೆ ಎಂದರೆ, ೫೦ ಸಾವಿರದಿಂದ ೬೦ ಸಾವಿರ ನೂಲಿನ ಸ್ಪಿಂಡಲ್ಸ್ ಇವೆ, ಅದಕ್ಕೆ ಬೇಕಾದಂಥ ವೀವಿಂಗ್ ಸೆಕ್ಷರ್ ಇದೆ. ಈಗ ಸರ್ಕಾರ ಕೊಡುತ್ತಿರುವ ಅಗ್ಗದ ಬಟ್ಟೆಯನ್ನು ಪೂರ್ತಿಯಾಗಿ ಈ ಮಿಲ್‌ನಿಂದಲೇ ತಯಾರಿಸಲು ಸಾಧ್ಯ ಇದೆ. ಬೇರೆ ಯಾರನ್ನೂ ಹೋಗಿ ತಾವು ಕೇಳಬೇಕಾಗಿಲ್ಲ. ಹೀಗಿರುವಾಗ ಸರ್ಕಾರವೇನಾದರೂ ಇದನ್ನು ತೆಗೆದುಕೊಂಡು, ಅಧಿಕಾರಿಗಳ ಕೈಗೆ ಕೊಟ್ಟಾಗ, ಡೆಪ್ಯುಟಿ ಕಮಿಷನರ್, ಡಿವಿಜನಲ್ ಕಮೀಷನರ್ ಯಾರನ್ನಾದರೂ ತಂದು ಕೂಡಿಸಿದರೆ, ಬೆಳಗಾವಿಯಲ್ಲಿರುವ ಡಿವಿಜನಲ್ ಕಮೀಷನರ್ ಕರಪ್ಟೀವ್ ಮನುಷ್ಯನನ್ನು ಇಲ್ಲಿ ಹಾಕಿದರೆ ಇದು ಮುಳುಗಿಯೇ ಹೋಗುತ್ತದೆ. ಸಹಕಾರಿ ಸಂಘಗಳನ್ನು ಹಾಳು ಮಾಡಿದಿರಿ. ಧಾರವಾಡ ಡಿಸ್ಟ್ರಿಕ್ಟ್ ಆಯಿಲ್ ಸೀಡ್ ಸೊಸೈಟಿಯನ್ನು ಸೆಕ್ಷನ್ ೫೪ ಜಾರಿ ಮಾಡಿ ನಿಮ್ಮಲ್ಲೇ ಇಟ್ಟುಕೊಂಡಿದ್ದೀರಿ. ಇದನ್ನು ನೋಡಿ ನನಗೆ ಬಹಳ ವ್ಯಸನವಾಯಿತು. ಸಹಕಾರಿಗಳಿಗೆ ಪಕ್ಷ, ಪಂಗಡ ಇರಬಾರದು. ಸಹಕಾರಿಗಳು ನಿಜವಾಗಿಯೂ ಜನತೆಯ ಅಭಿವೃದ್ಧಿಗಾಗಿ ಕೆಲಸ ಮಾಡಬೇಕು. ಅದನ್ನು ಅಪೆಕ್ಸ್ ಬ್ಯಾಂಕಿಗೆ ಕೊಟ್ಟಿದ್ದರೆ ಒಳ್ಳೆಯದಿತ್ತು. ಇದೆಲ್ಲವ ಬಿಟ್ಟು ಇದನ್ನು ಪಬ್ಲಿಕ್ ಅಂಡರ್‌ಟೇಕಿಂಗ್ ಆಗಿ ತೆಗೆದುಕೊಂಡು ಬಂದಿದ್ದಾರೆ. ಈಗಾಗಲೇ ಇದರ ಬಗ್ಗೆ ಆರ್ಡಿನೆನ್ಸ್ ಬೇರೆ ಹೊರಡಿಸಿ ಆಗಿದೆ. ಸಮಾಜವಾದದ ಬಗ್ಗೆ ನಂಬಿಕೆ ಇರುವ ಶ್ರೀ ಲಕ್ಷ್ಮೀಸಾಗರ್ ಅವರ ಕೈಯಲ್ಲಿ ಇದನ್ನು ಏಕೆ ಮಂಡನೆ ಮಾಡಿಸಿದಿರೋ ತಿಳಿಯಲಿಲ್ಲ. ಜೆ. ಹೆಚ್ ಪಟೇಲರಿಂದ ಮಾಡಿಸಿದ್ದರೆ, ಹೌದು ನಮ್ಮವರಿಗೆ ಕೊಡಲಿಕ್ಕಾಗಿ ಇದನ್ನು ಮಾಡಿದ್ದೇವೆ ಎಂದು ಹೇಳುತ್ತಿದ್ದರೆ ಅದು ಯೋಗ್ಯವಾಗಿಯೂ ಇರುತ್ತಿತ್ತು.

೧೨-೦೦ ಮಧ್ಯಾಹ್ನ

ಮಾನ್ಯ ಲಕ್ಷ್ಮೀಸಾಗರ್ ಅವರು ಶ್ರೀ ಜೆ. ಎಚ್. ಪಟೇಲ್ ಅವರ ತರಹ ಹೇಳುವುದಿಲ್ಲ. ಈಗಿರುವಂತಹ ಕಾನೂನುಗಳನ್ನು ತಿದ್ದಿ ತಿದ್ದಿ ಬೇರೆ ಯಾರಿಗೋ ಅನುಕೂಲವಾಗುವ ರೀತಿಯಲ್ಲಿ ಇಂತಹ ವಿಧೇಯಕಗಳನ್ನು ತರುತ್ತಿರುವುದು ಸರಿಯಲ್ಲ. ಸರ್ಕಾರದ ವಶದಲ್ಲಿರುವ ಕೈಗಾರಿಕೆಗಳನ್ನೇ ಬೇರೆಯವರಿಗೆ ವಹಿಸಿಕೊಡಬೇಕು ಎಂದು ಹೇಳುತ್ತಿರುವಾಗ, ಇದನ್ನು ನಿಮ್ಮ ಕೈಯಲ್ಲಿ ನಡೆಸುವುದಕ್ಕಾಗುವುದಿಲ್ಲ. ಇಲ್ಲಿಯವರೆಗೆ ನೀವು ಹೊಸದಾಗಿ ಯಾವುದನ್ನೂ ನಿಮ್ಮ ವಶಕ್ಕೆ ತೆಗೆದುಕೊಂಡಿಲ್ಲ. ಈ ಹಿಂದೆ ಬಿಜಾಪುರ ಜಿಲ್ಲೆಯ ಟೆಕ್ಸ್‌ಟೈಲ್ ಮಿಲ್‌ನ್ನು ವಹಿಸಿಕೊಂಡು ಅಲ್ಲಿಗೆ ಅಧಿಕಾರಿಗಳನ್ನು ನೇಮಕ ಮಾಡಿದಿರಿ. ಒಂದು ಕೋಟಿ ರೂಪಾಯಿಗಳನ್ನು ಸಹ ಕೊಟ್ಟಿರಿ. ಆದರೆ ಅದು ಮುಂದೆ

ಬರಲಿಲ್ಲ. ಆದೇರೀತಿ ರಾಯಚೂರ್‌ನ ಮಿಲ್ ಒಂದನ್ನು ನೀವು ವಹಿಸಿಕೊಂಡು, ಆದಕ್ಕೆ ಐ.ಎ.ಎಸ್. ದರ್ಜೆಯ ಅಧಿಕಾರಿ ಒಬ್ಬರನ್ನು ನೇಮಕ ಮಾಡಿದಿರಿ. ಆದರೆ ಅದು ಸಹ ಸರಿಯಾಗಿ ನಡೆಯದೆ ಬಂದ್ ಆಯಿತು. ಬೇರೆ ಖಾಸಗಿ ಮಿಲ್‌ಗಳು ಚೆನ್ನಾಗಿ ನಡೆಯುತ್ತಿರುವಾಗ ನಿಮ್ಮ ಮಿಲ್‌ಗಳು ಬಂದ್ ಆಗಲು ಕಾರಣವೇನು ? ಇದಕ್ಕೆ ಕಾರಣರಾದಂಥ ಅಧಿಕಾರಿಗಳನ್ನು ಮನೆಗೆ ಕಳುಹಿಸುವ ಕೆಲಸವನ್ನು ಸಹ ತಾವು ಮಾಡುವುದಿಲ್ಲ. ಆ ಒಂದು ಧೈರ್ಯ ನಿಮಗೆ ಇಲ್ಲ. ನಮ್ಮಲ್ಲಿ ಅಧಿಕಾರಿಗಳ ಒಂದು ತಂಡವೇ ಇದೆ. ಇವರಲ್ಲಿ ನೀವು ಒಬ್ಬರನ್ನು ಮುಟ್ಟಿದರೆ ಸಾಕು, ಉಳಿದವರೆಲ್ಲಾ ಒಗ್ಗಟ್ಟಾಗುತ್ತಾರೆ. ಅದ್ದರಿಂದ ನಿಮಗೆ ಯಾರನ್ನೇ ಆಗಲಿ, ಮುಟ್ಟಲು ಆಂಜಿಕೆ ಬರುತ್ತದೆ. ಇವೊತ್ತು ಎಲ್ಲಾ ಕಡೆ ಆಗುತ್ತಿರುವ ನಷ್ಟಕ್ಕೆ ಈ ಅಧಿಕಾರಿಗಳೇ ಕಾರಣರಾಗಿದ್ದಾರೆ. ಸರ್ಕಾರಕ್ಕೆ ಲುಕ್ಷಾನು ಮಾಡಿದ ಅಧಿಕಾರಿಗಳ ಮೇಲೆ ಯಾವುದೇ ಕೇಸ್ ಹಾಕಿಲ್ಲ. ಇಂತಹ ಅಧಿಕಾರಿಗಳ ವಿರುದ್ಧ ಮಾನ್ಯ ಜಾಲಪ್ಪನವರು ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಇದಕ್ಕೆ ಬದಲು ಇಂತಹ ಅಧಿಕಾರಿಗಳನ್ನು ಮೇಲಕ್ಕೆತ್ತಿದ್ದಾರೆ. ನಾನು ಇಲ್ಲಿ ಸತ್ಯ ಸಂಗತಿಯನ್ನೇ ಹೇಳುತ್ತಿದ್ದೇನೆ. ನಾನು ಮಾತನಾಡಿದ್ದರಲ್ಲಿ ಒಂದಾದರೂ ತಪ್ಪಿದ್ದರೆ ನಾನು ಈ ಮನೆಯಿಂದ ನಿರ್ಗಮನ ಮಾಡುತ್ತೇನೆ. ಸಹಕಾರಿ ಕ್ಷೇತ್ರದಲ್ಲಿ ನಮ್ಮ ಕರ್ನಾಟಕ ರಾಜ್ಯ ಒಳ್ಳೆಯ ಹೆಸರನ್ನು ಪಡೆದಿದೆ. ಈ ಒಂದು ಉತ್ತಮವಾದ ಪರಂಪರೆಯನ್ನು ನಮ್ಮ ರಾಜ್ಯ ಮೊದಲಿನಿಂದಲೂ ಕಾಪಾಡಿಕೊಂಡು ಬಂದಿದೆ. ಕರ್ನಾಟಕ ರಾಜ್ಯದಲ್ಲಿ ಮುಂಬೈ ಪ್ರಾಂತ್ಯದ ಕೆಲವು ಭಾಗಗಳು ಸೇರಿದ ಮೇಲೆ ಸಹಕಾರಿ ರಂಗ ಬಹಳ ಚೆನ್ನಾಗಿ ಬೆಳೆದುಕೊಂಡು ಬಂದಿದೆ. ಇಡೀ ಭಾರತ ದೇಶವನ್ನು ತೆಗೆದುಕೊಂಡರೆ, ಸಹಕಾರಿ ಚಳುವಳಿ ಮೊದಲು ಪ್ರಾರಂಭವಾಗಿದ್ದು ನಮ್ಮ ರಾಜ್ಯದಲ್ಲಿ. ಅದ್ದರಿಂದ ಈ ಸಹಕಾರಿ ಕ್ಷೇತ್ರವನ್ನು ನೀವು ಬೆಳೆಸಬೇಕೇ ಹೊರತು, ಅದನ್ನು ಕೊಲ್ಲಬಾರದು. ಮಾನ್ಯ ಜೆ. ಹೆಚ್. ಪಟೇಲ್ ಅವರು ಇಂತಹ ಕಾಯಿದೆಗಳನ್ನು ಮಾಡಿ ಈ ಬಟ್ಟೆ ಗಿರಣಿಗಳನ್ನು ಖಾಸಗಿಯವರಿಗೆ ವಹಿಸುವುದಕ್ಕೆ ಬದಲು ಸಹಕಾರಿ ಕ್ಷೇತ್ರದಲ್ಲೇ ನಡೆಸುವುದು ಒಳ್ಳೆಯದು, ಅಧಿಕಾರಿಗಳು ಏನಾದರೂ ತಪ್ಪು ಮಾಡಿದರೆ, ಅಂತಹವರನ್ನು ಮಟ್ಟ ಹಾಕಬೇಕೇ ಹೊರತು ಯಾವ ರೀತಿಯಿಂದಲೂ ಅವರನ್ನು ಪ್ರೋತ್ಸಾಹಿಸಬಾರದು. ಈ ಹಿಂದೆ ಧಾರವಾಡ ಜಿಲ್ಲೆಯ ಆಯಿಲ್ ಸೀಡ್ಸ್ ಸೊಸೈಟಿಗೆ ಮೇನೇಜಿಂಗ್ ಡೈರಕ್ಟರ್ ಆಗಿ ಒಬ್ಬರು ಅಧಿಕಾರಿಯನ್ನು ನೇಮಕ ಮಾಡಿದರು. ಅವರು ನಿಯಮಗಳಿಗೆ ವಿರುದ್ಧವಾಗಿ ಲಕ್ಷಗಟ್ಟಲೆ ಬೆಲೆಬಾಳುವ ಆಯಿಲ್ ಸೀಡ್ಸ್‌ನ್ನು ಮಾರಾಟ ಮಾಡಿದರು. ಈ ಬಗ್ಗೆ ಅವರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂದು ನಾನು ಕೇಳಿದ್ದಕ್ಕೆ ಮಾನ್ಯ ಜಾಲಪ್ಪನವರು ಅವರ ಮೇಲೆ ಸೂಕ್ತ ತನಿಖೆಗೆ ವ್ಯವಸ್ಥೆ ಮಾಡುವುದಾಗಿ ಹೇಳಿದರು. ಆದರೆ ಇವರು ತನಿಖೆಗೆ ಕಳುಹಿಸಿಕೊಟ್ಟ ಅಧಿಕಾರಿಗಳು ಯಾರೆಂದರೆ, ಅಸಿಸ್ಟೆಂಟ್ ರಿಜಿಸ್ಟ್ರಾರ್ ಅಥವಾ ಜಾಯಿಂಟ್ ರಿಜಿಸ್ಟ್ರಾರ್. ತಪ್ಪು ಮಾಡಿದ ಅಧಿಕಾರಿ ಕೈಕೆಳಗೆ ಕೆಲಸ ಮಾಡುವಂಥವರನ್ನೇ ತನಿಖೆಗೆ ಕಳುಹಿಸಿಕೊಟ್ಟರೆ ತನಿಖೆ ಯಾವರೀತಿ ಸರಿಯಾಗಿ ನಡೆಯುತ್ತದೆ ? ಈ ಅಧಿಕಾರಿ ಎಂತಹ ಮನೆ ಕಟ್ಟಿಸಿದ್ದಾರೆಂದರೆ, ನೀವು ಹತ್ತು ಜನ್ಮ ಗಳನ್ನು ಎತ್ತಿ ಬಂದರೂ ಸಹ ಅಂತಹ ಮನೆಯನ್ನು ಕಟ್ಟಿಸುವುದಕ್ಕಾಗುವುದಿಲ್ಲ. ತಪ್ಪು ಮಾಡಿದ ಅಧಿಕಾರಿಗಳನ್ನು ಮುಟ್ಟಲು ನಿಮ್ಮ ಕೈಯಲ್ಲಿ ಆಗುವುದಿಲ್ಲ. ಏನಾದರೂ ಕ್ರಮ ತೆಗೆದುಕೊಳ್ಳಲು ಹೊರಟರೆ, ಅವರೆಲ್ಲರೂ ಸೇರಿಕೊಂಡು ನಿಮ್ಮನ್ನೇ ಮಟ್ಟ ಹಾಕುತ್ತಾರೆ. ಯಾರಿಗೆ ವ್ಯವಹಾರ ಜ್ಞಾನ ಇರುವುದಿಲ್ಲವೋ, ಅಂತಹ ಅಧಿಕಾರಿಗಳನ್ನೇ ಈ ಮಿಲ್‌ಗಳನ್ನು ನೋಡಿಕೊಳ್ಳಲು ನೇಮಕ ಮಾಡುತ್ತೀರಿ. ಇದರಿಂದಲೇ ಅವು ನಷ್ಟಕ್ಕೆ ಗುರಿಯಾಗುತ್ತಿರುವುದು. ಆದರೂ ನೀವು ಇಂತಹ ಅಧಿಕಾರಿಗಳ ಹತ್ತಿರವೇ ಉಪದೇಶ ಪಡೆಯಲು ಹೋಗುತ್ತೀರಿ. ಇದು ಮೊದಲು ತಪ್ಪಬೇಕು. ಇವೊತ್ತಿನ ಸಹಕಾರಿ ಚಳುವಳಿಯಲ್ಲಿಯೇ ಏನೋ ದೋಷ ಇದೆ ಎಂದು ತಾವು ಹೇಳುತ್ತೀರಿ ? ನನಗೆ ತಿಳಿದ ಪ್ರಕಾರ ಅಲ್ಲಿ ಯಾವ ದೋಷವೂ ಇಲ್ಲ. ಇಲ್ಲಿಯವರೆಗೆ ಅನೇಕ ಮಾರ್ಕೆಟಿಂಗ್ ಸೊಸೈಟಿಗಳನ್ನು ಕಟ್ಟಿ ಬೆಳೆಸಿದ್ದೀರಿ, ಉಳಿಸಿದ್ದೀರಿ, ಹೊಸದಾಗಿ ರಚನೆ ಮಾಡಿದ್ದೀರಿ. ಒಂದುವೇಳೆ ಏನಾದರೂ ದೋಷ ವಿದ್ದರೆ, ಅದು ಅಧಿಕಾರಿಗಳ ಕಡೆಯಿಂದ. ಏಕೆಂದರೆ, ಸರಿಯಾದ ವ್ಯವಹಾರ ಜ್ಞಾನ ಪಡೆಯದವರನ್ನು ಇಲ್ಲಿಗೆ ನೇಮಕ ಮಾಡುತ್ತೀರಿ. ಆದ್ದರಿಂದ ಈ ಬಗ್ಗೆ ತಾವು ಪುನಃ ವಿಚಾರ ಮಾಡಿ. ಡೆಪಾಕ್ಟೆಷಿಯಲ್ಲಿ ಅಧಿಕಾರಿಗಳನ್ನು ಹಾಕುವುದು ಬೇಡ ಎಂದು ನಾನು ಹೇಳುವುದಿಲ್ಲ. ಮೇನೇಜಿಂಗ್ ಡೈರೆಕ್ಟರ್ ಆಗಿ ನೇಮಕ ಮಾಡುವಾಗ ಡಿ. ಪಿ. ಮಟ್ಟದ ಅಧಿಕಾರಿಗಳನ್ನೋ ಇಲ್ಲವೇ ಅಸಿಸ್ಟೆಂಟ್ ಕಮೀಷನರ್ ಮಟ್ಟದ ಅಧಿಕಾರಿಗಳನ್ನೋ ಹಾಕುತ್ತೀರಿ. ಈ ರೀತಿ ನೇಮಕ ಮಾಡುವಾಗ ಸರಿಯಾದ ವ್ಯವಹಾರ ಜ್ಞಾನ ಇರುವವರನ್ನೇ ನೇಮಕ ಮಾಡಬೇಕು. ಇದರ ಜೊತೆಗೆ ಎಲ್ಲಾ ಬ್ಯಾಂಕ್‌ಗಳಿಗೂ ಮತ್ತು ಎಲ್ಲಾ ಸೊಸೈಟಿಗಳಿಗೂ ಅಧಿಕಾರಿಗಳನ್ನು ನಾಮಕರಣ ಮಾಡುವಾಗ, ಶೇ ಜನ ಚುನಾಯಿತ ಸದಸ್ಯರು ಇರುವ ಕಡೆಗಳಲ್ಲಿ ೯ ಜನರನ್ನು ನಾಮಕರಣ ಮಾಡುವುದು ಸರಿಯಲ್ಲ. ಇದು ತಪ್ಪಬೇಕು. ಈ ಬಟ್ಟೆ ಗಿರಣಿಯನ್ನು ಖಾಸಗಿಯವರಿಗೆ ವಹಿಸುವುದಕ್ಕೆ ಬದಲು ಮಾರ್ಕೆಟಿಂಗ್ ಫೆಡರೇಷನ್ ಅವರಿಗಾಗಲೀ ಇಲ್ಲವೇ ಅಪೆಕ್ಸ್ ಬ್ಯಾಂಕ್‌ನವರಿಗೆ ಆಗಲೀ ವಹಿಸಿಕೊಟ್ಟು, ಅಪೆಕ್ಸ್ ಬ್ಯಾಂಕ್ ಛೇರ್‌ಮನ್ ಅವರನ್ನೂ ಇದಕ್ಕೂ

ಫೇರ್‌ಮನ್ ಮಾಡಿದ್ದರೆ ಇದು ಇನ್ನೂ ಚೆನ್ನಾಗಿ ನಡೆಯುತ್ತಿತ್ತು. ಆದು ಸಾಧ್ಯವಾಗದಿದ್ದರೆ ಇದನ್ನು ರಾಷ್ಟ್ರೀಯ ಬಟ್ಟೆಗಿರಣಿಗಳಿಗೆ ವಹಿಸಿಕೊಡಬಹುದಾಗಿತ್ತು. ಇಲ್ಲದಿದ್ದರೆ ಏನಾಗುತ್ತದೆಂಬುದಕ್ಕೆ ಒಂದು ಉದಾಹರಣೆ ಕೊಡುತ್ತೇನೆ. ಈ ಹಿಂದೆ ಹರಿಜನರ ಅಭಿವೃದ್ಧಿಗಾಗಿ ಒಂದು ಫೈನಾನ್ಸ್ ಕಾರ್ಪೋರೇಷನ್ ರಚನೆ ಆಯಿತು. ಅದಕ್ಕೆ ಸರ್ಕಾರದವರು ಒಂದು ಕೋಟಿ ರೂಪಾಯಿಗಳನ್ನು ಕೊಟ್ಟರು. ನಮ್ಮ ಪಕ್ಷದವರೇ ಅಧಿಕಾರದಲ್ಲಿದ್ದಾಗ ಆಗತ್ಯವಿದ್ದವರಿಗೆ ಸಾಲ ವಿತರಣೆ ಮಾಡಲು ಅರ್ಜಿಗಳನ್ನು ಕರೆದರು. ಅರ್ಜಿಗಳನ್ನು ಹಾಕಿಕೊಂಡವರು ಖರ್ಚು ಮಾಡಿದಷ್ಟು ಹಣವನ್ನು ಸಹ ಸಾಲದ ರೂಪದಲ್ಲಿ ಹಂಚಿಕೆ ಮಾಡಲಿಲ್ಲ. ಇಂತಹ ಅಧಿಕಾರಿಗಳ ಕೈಯಲ್ಲಿ ಅಧಿಕಾರ ಕೊಡಬೇಡಿ ಎಂದು ನಾನು ಹೇಳುತ್ತಿರುವುದು. ಈ ೭ ಮಿಲ್‌ಗಳು ಏನು ನಡೆಯುತ್ತಿವೆ, ಇವುಗಳ ಬಡ್ಜೆಟ್‌ನ್ನು ನೋಡಿದರೆ ನಿಮಗೆ ಆಶ್ಚರ್ಯವಾಗಬಹುದು. ಏಕೆಂದರೆ, ನೀವು ಅಂದಾಜು ಮಾಡಿರುವುದಕ್ಕಿಂತ ಹೆಚ್ಚಿನ ಬಡ್ಜೆಟ್ ಬರುತ್ತದೆ. ಇಲ್ಲಿನ ಅಧಿಕಾರಗಳಿಗೆ ಅಧಿಕಾರ ಚಲಾಯಿಸುತ್ತಾರೆಯೇ ಹೊರತು, ಹಣವನ್ನು ಸರಿಯಾಗಿ ವಿತರಣೆ ಮಾಡುವುದು ಗೊತ್ತಿಲ್ಲ. ಯಾವರೀತಿ ಕೆಲಸ ಮಾಡಬೇಕೆಂಬ ಅರಿವು ಇಲ್ಲ. ಆದ್ದರಿಂದ ಇದನ್ನು ನಾನು ಬಲವಾಗಿ ವಿರೋಧ ಮಾಡುತ್ತೇನೆ, ಮೊದಲು ನಾನು ಇದನ್ನು ಒಪ್ಪುವುದಿಲ್ಲ ಎಂದಿದ್ದೆ. ಆದರೆ ಇದು ಕುತ್ತಿಗೆಗೆ ಹಗ್ಗ ಹಾಕುವ ರೀತಿಯಲ್ಲಿ ಇದೆ. ಮಾನ್ಯ ಜೆ. ಹೆಚ್. ಪಟೇಲ್ ಅವರ ಹೆಸರಿನಲ್ಲಿರುವ ಈ ವಿಧೇಯಕವನ್ನು ಮಾನ್ಯ ಲಕ್ಷ್ಮೀಸಾಗರ್ ಅವರ ಕೈಯಲ್ಲಿ ಮಂಡನೆ ಮಾಡಿಸಿದ್ದುದು ಸರಿಯಲ್ಲ. ಮಾನ್ಯ ಪಟೇಲ್ ಅವರೇ ಮಂಡನೆ ಮಾಡಬೇಕಾಗಿತ್ತು. ಸಹಕಾರಿ ಕ್ಷೇತ್ರದಲ್ಲಿ ಇದು ನಡೆಯುವಂತೆ ವ್ಯವಸ್ಥೆ ಮಾಡಿ ಒಳ್ಳೆಯ ಅಧಿಕಾರಿಗಳನ್ನು ನೇಮಕ ಮಾಡಿದ್ದರೆ ಚೆನ್ನಾಗಿರುತ್ತಿತ್ತು. ಈ ರೀತಿ ಮಾಡಿ ನಿಮ್ಮ ಪಕ್ಷದವರೇ ಆದ ಶ್ರೀ ದೊಡ್ಡಮೇಟಿ ಅವರನ್ನು ಇದರ ಮೆಂಬರ್ ಎಂದು ಮಾಡಿದ್ದರೆ ಹೆಚ್ಚು ಸೂಕ್ತವಾಗಿರುತ್ತಿತ್ತು. ಆದರೆ ಸರ್ಕಾರದವರು ಈಗ ಕೈಕೊಂಡಿರುವ ತೀರ್ಮಾನವನ್ನು ನಾನು ಪ್ರಬಲವಾಗಿ ವಿರೋಧಿಸುತ್ತೇನೆ. ಇದು ಒಂದು ಕೆಟ್ಟ ವಿಧೇಯಕವಾಗಿದೆ. ಇದು ಸಹಕಾರಿ ರಂಗಕ್ಕೆ ಮಾರಕವಾಗಿದೆ. ಆದ್ದರಿಂದ ಇದನ್ನು ಯಾರೂ ಒಪ್ಪಬಾರದೆಂದು ಹೇಳುತ್ತೇನೆ ಮತ್ತು ಇದನ್ನು ವಾಪಸ್ ಪಡೆದು ಮತ್ತೊಮ್ಮೆ ವಿಚಾರ ಮಾಡುವುದು ಒಳ್ಳೆಯದೆಂದು ಮಾನ್ಯ ಲಕ್ಷ್ಮೀಸಾಗರ್ ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

† ಶ್ರೀ ಎಂ, ವೀರಪ್ಪ ಮೊಯಿಲಿ (ಕಾರ್ಕಳ).—ಮಾನ್ಯ ಅಧ್ಯಕ್ಷರೇ, ಈ ಮಸೂದೆ ತೋರಿಕೆಯಷ್ಟಕ್ಕೆ ಬಹಳ ಚೆನ್ನಾಗಿ ಕಾಣುತ್ತದೆ. ಸರ್ಕಾರದವರು ಈ ಮುಚ್ಚಿರುವ ಮಿಲ್ಲ್‌ನ್ನು ತೆರೆಯುವ ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದಾರೆಂಬ ಅಭಿಪ್ರಾಯ ಇದನ್ನು ನೋಡಿದಾಗ ತಮಗಾಗಲೀ ಅಥವಾ ನಮಗಾಗಲೀ ಬರುತ್ತದೆ. ಅಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರು ಏನಿದ್ದಾರೆ, ಅವರಿಗೆ ಒಂದು ರೀತಿಯಲ್ಲಿ ಪುನರ್ವಸತಿ ಕಲ್ಪಿಸಿಕೊಡತಕ್ಕಂಥ ದಿಸೆಯಲ್ಲಿ ಸರ್ಕಾರದವರು ಕೃಪೆ ತೆಗೆದುಕೊಂಡಿದ್ದಾರೆಂಬ ಅಭಿಪ್ರಾಯ ಬರುತ್ತದೆ. ಇದು ನೋಡಲು ಇನ್ನಾಕ್ಯುಸ್ ತರಹ ಇದೆ. ಆದರೆ ಇದನ್ನು ವಿವರವಾಗಿ ನೋಡಿದಾಗ, ಇದೊಂದು ಗಂಭೀರವಾದಂಥ ವಿಧೇಯಕವಾಗಿದೆ ಎಂದು ಅರ್ಥವಾಗುತ್ತದೆ. ಈ ಸದನ ಮತ್ತು ಈ ಸದನದ ಮಾನ್ಯ ಸದಸ್ಯರು ಇದು ಬಹಳ ಸರಳವಾಗಿದೆ ಎಂದು ತಿಳಿದುಕೊಂಡು ಮಂಜೂರಾತಿಗೆ ಒಪ್ಪಬಹುದು. ಇವೊತ್ತು ಮಂಜೂರು ಮಾಡುವುದು ಬಹಳ ಸುಲಭ. ಬಹಳ ಸರಳವಾಗಿ ಇದನ್ನು ಮಂಜೂರು ಮಾಡಿದರೆ ಮುಂದೆ ನಮ್ಮ ಜನರಿಗೆ ನಾವು ಉತ್ತರ ಕೊಡಬೇಕಾಗಿ ಬರುತ್ತದೆ. ಈಗ ನಮಗೆ ಒಂದು ಕಷ್ಟ ಏನಾಗಿದೆ ಎಂದರೆ, ಇಲ್ಲಿ ಕೆಲವು ಗಂಭೀರವಾದಂಥ ಮಸೂದೆಗಳನ್ನು ಸರ್ಕಾರದವರು ತಂದಾಗ ಆ ಬಗ್ಗೆ ಕಟುವಾದಂಥ ಟೀಕೆ ಮಾಡಬಾರದೆಂದು ಜನತಾ ಪಕ್ಷದವರು ಹೇಳುತ್ತಾರೆ. ಮೊಯಿಲಿ ಅವರು ಯಾವಾಗಲೂ ಕಟು ಟೀಕೆ ಮಾಡುತ್ತಾರೆಂದು ಹೇಳುತ್ತಾರೆ.

ಶ್ರೀ ಎ. ಲಕ್ಷ್ಮೀಸಾಗರ್.—ಟೀಕೆಯನ್ನು, ಕಟುಟೀಕೆಯನ್ನು ಅಥವಾ ಬೇರೆ ರೀತಿಯ ಲೋಪದೋಷಗಳನ್ನು ತೋರಿಸಬಾರದು ಎಂದು ನಾನಂತೂ ಹೇಳಲಿಲ್ಲ, ನಮ್ಮ ಸರ್ಕಾರವಾಗಲಿ, ಮಂತ್ರಿಗಳಾಗಲಿ, ಮಾನ್ಯ ಸದಸ್ಯರಾಗಲಿ ಹೇಳಲಿಲ್ಲ. ನೀವು ಇಲ್ಲಿ ಕುಳಿತಿದ್ದಾಗ ನಾನು ಅಲ್ಲಿ ಕುಳಿತು ಇದೇ ಜವಾಬ್ದಾರಿಯನ್ನು ಮಾಡಿದ್ದೇನೆ. ನಾನು ವಿರೋಧಪಕ್ಷದಲ್ಲಿದ್ದಾಗ ಮುಖಕ್ಕೆ ನೋಡಿ ಮಣೆ ಹಾಕತಕ್ಕಂಥ ನಿಯಮವನ್ನು ಪಾಲಿಸದೆ ನನ್ನ ಮನಸ್ಸಿಗೆ. ನನ್ನ ತಿಳುವಳಿಕೆಗೆ ಯಾವುದು ಸಾಧು, ಯಾವುದು ಅಸಾಧು ಎನ್ನತಕ್ಕಂಥ ತೀರ್ಮಾನಕ್ಕೆ ಬರುತ್ತದೆಯೋ ಆ ತೀರ್ಮಾನದ ಹಿನ್ನೆಲೆಯಲ್ಲಿ ಕಟುವಾಗಿ ಟೀಕೆ ಮಾಡಿದ್ದೇನೆ. ತಮಗೆ ಗೊತ್ತಿದೆ, ನಾವು ಅಧಿಕಾರದಲ್ಲಿರತಕ್ಕವರು ಸರ್ವಜ್ಞರಲ್ಲ,

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಬ್ರಹ್ಮರಲ್ಲ. ನಾವೂ ತಪ್ಪು ಮಾಡುತ್ತೇವೆ, ಆ ರೀತಿ ತಪ್ಪು ಮಾಡುವುದನ್ನು ತಪ್ಪಿಸತಕ್ಕಂಥ, ನಿಯಂತ್ರಣದಲ್ಲಿಟ್ಟುಕೊಳ್ಳತಕ್ಕಂಥ ಜವಾಬ್ದಾರಿ ತಮ್ಮದು. ತಾವು ತಪ್ಪುಗಳನ್ನು ಎತ್ತಿ ತೋರಿಸಿದರೆ ತಿದ್ದಿಕೊಳ್ಳತಕ್ಕಂಥ ಪ್ರಯತ್ನ ನಮ್ಮದಾಗಿರುತ್ತದೆ. ಆದರಲ್ಲಿ ಲೋಪದೋಷಗಳನ್ನು ಮಾಡುವುದಿಲ್ಲ ಎನ್ನುವ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅಂತಹ ಟೀಕೆ ಬಸ್ತುನಿಷ್ಠವಾದಂತಹ ಟೀಕೆಯಾಗಿದ್ದರೆ ಆದನ್ನು ನಾವು ಸ್ವೀಕರಿಸಿದ್ದೇವೆ. ಅಹುದಾದರೆ ಅಹುದೆನ್ನಿ, ಇಲ್ಲವಾದರೆ ಇಲ್ಲವೆನ್ನಿ ಎನ್ನತಕ್ಕಂಥ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಬಹಳ ಸಂತೋಷ, ಜನತಾದವರದು ಸ್ವಲ್ಪ ಧೋರಣೆ ಬದಲಾಗಿದೆ. ಏಕೆಂದರೆ, ಟೀಕೆ ಮಾಡಿದ ಕೂಡಲೇ ಏನು ಆಗುತ್ತದೆ, ಎರಡು ವಿಧ ನಷ್ಟವಾಗುತ್ತದೆ. ವಿರೋಧಪಕ್ಷದವರು ಟೀಕೆ ಮಾಡಿದ ಕೂಡಲೇ ಲಕ್ಷಾಂತರ ರೂಪಾಯಿಗಳು ಖರ್ಚು ಮಾಡುತ್ತಾರೆ ಎಂದು ಒಂದು ಪಬ್ಲಿಕೇಷನ್ ಬಂದೇ ಬಿಡುತ್ತದೆ. ಸ್ವೀಕಾರ ಮಾಡುವಂಥಾದ್ದು ಒಂದುರೀತಿ. ಟೀಕೆ ಸ್ವೀಕಾರ ಮಾಡಿ ತಮ್ಮ ಧೋರಣೆಯನ್ನು ಸರಿಪಡಿಸಬೇಕು ಎಂದು ವಿಚಾರ ಮಾಡುವುದಿಲ್ಲ. ಏನು ಟೀಕೆ ಮಾಡಿದರೂ ಅದಕ್ಕೆ ಪ್ರತ್ಯುತ್ತರವಾಗಿ ಲಕ್ಷಾಂತರ ರೂಪಾಯಿ ಖರ್ಚು ಮಾಡಿ ಪಬ್ಲಿಕೇಷನ್ ಬಂದೇ ಬಿಡುತ್ತದೆ. ಇವತ್ತು ಸ್ವಲ್ಪ ಟೀಕೆಯನ್ನು ಸ್ವೀಕರಿಸತಕ್ಕ ಮೂಲ ಬದಲಾವಣೆ ಯಾಗಿದೆ. ಈಗ ಈ ಬಿಲ್ ಎರಡು ವಿಧದಲ್ಲಿ ಸಾಧುವಾಗಿಲ್ಲ. ಆದರೆ ಒಂದು ಸಿದ್ಧಾಂತದ ಹಿನ್ನೆಲೆಯಲ್ಲಿ ಇದು ಸರಿಯಾಗಿದೆ. ಏಕೆಂದರೆ ಮಾನ್ಯ ಕೆ.ಹೆಚ್. ಪಾಟೀಲರು ಬಹಳ ಚೆನ್ನಾಗಿ ಹೇಳಿದರು. ಅವರು ಸಹಕಾರ ರಂಗದಲ್ಲಿ ದೊಡ್ಡ ಹೋರಾಟಗಾರರು. ಈ ಬಿಲ್ ಏನೆಂದರೆ, It is a nationalisation of co-operatives. This amounts to that ಅಲ್ಲವೇ! ಯಾರಾದರೂ ಕೇಳಿದರೆ ದೇಶದಲ್ಲಿ ನ್ಯಾಷನಲೈಸೇಷನ್ ಆಫ್ ಕೋ-ಆಪರೇಟೀವ್ಸ್, ನ್ಯಾಷನಲೈಸೇಷನ್ ಆಫ್ ಪ್ರೈವೇಟ್ ಸೆಕ್ಟಾರ್ ಅಲ್ಲ. ನ್ಯಾಷನಲೈಸೇಷನ್ ಆಫ್ ಕೋ-ಆಪರೇಟೀವ್ ಸೆಕ್ಟಾರ್. ಇದು ಯಾರ ಡಿಕ್ಷನರಿಯಲ್ಲಿ ಇದೆಯೋ ನನಗಂತೂ ಅರ್ಥವಾಗುತ್ತಿಲ್ಲ, ಈ ಹೊಸ ತಿಯರಿ ಜನತಾ ಪಕ್ಷದ್ದು.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಇದ್ದ ಫ್ಯಾಕ್ಟರಿಗಳು ಸರಿಯಾಗಿ ನಡೆಯುತ್ತಿಲ್ಲ, ಪ್ರೈವೇಟ್‌ನವರಿಗೆ ಕೊಡುತ್ತಾರೆ, ಲಾಸ್ ಮಾಡಿಕೊಳ್ಳಿ ಎಂದು ಹೇಳುತ್ತಾರೆ. ಇನ್ನೊಂದು ಕಡೆ ಈ ರೀತಿ ಮಾಡುತ್ತಾರೆ. ಅಧ್ಯಕ್ಷರೇ, ಅವರಿಗೆ ಏನು ಮಾಡಬೇಕು ಹೇಳಿ ?

ಶ್ರೀ ಎಂ. ವೀರಪ್ಪ ಮೊಯಿಲಿ.—ಅಧ್ಯಕ್ಷರೆ, ಇದು ಸಹಕಾರ ರಂಗದ ರಾಷ್ಟ್ರೀಕರಣ. ಇದು ಬಹಳ ಚೆನ್ನಾಗಿದೆ. ದೇಶದಲ್ಲಿ ಇದು ಒಂದು ಹೊಸ ಮಾದರಿ, ಹೊಸ ಸಿದ್ಧಾಂತವನ್ನು ಇವತ್ತು ತಾವು ತಂದಿದ್ದೀರಿ. ಮಾನ್ಯ ದೊಡ್ಡ ಮೇಟಿಯವರು ಸ್ವಲ್ಪ ಈ ಬಿಲ್ಲನ್ನು ಓದಿ ನಿಮ್ಮ ಪಕ್ಷದಲ್ಲಿ ಇದರ ಬಗ್ಗೆ ಚರ್ಚೆಯಾಗಿದೆಯೋ ಇಲ್ಲವೋ ಗೊತ್ತಿಲ್ಲ. ಚರ್ಚೆಯಾಗಿದ್ದರೆ ಇಲ್ಲಿ ಬರುತ್ತಾ ಇರಲಿಲ್ಲ. ಅನೇಕ ಸೋಷಲಿಸ್ಟ್ ಇದ್ದಾರೆ. ಇವೊತ್ತು ಸಹಕಾರಿ ರಂಗವನ್ನು ರಾಷ್ಟ್ರೀಕರಣ ಮಾಡತಕ್ಕಂಥಾದ್ದು. It is a more radical step. ಈಗ ನಾವು ಸಹಕಾರಿ ತತ್ವಕ್ಕೆ ಪ್ರಚೋದನೆ [illegible]. ಆ ತತ್ವವನ್ನು ಎಲ್ಲಾ ಕಾಲದಲ್ಲಿ ನಡೆಸಬೇಕು. ಈಗ ದೃಷ್ಟಿ ಏನಿದೆಯೆಂದರೆ, ಉದಾಹರಣೆಗೆ [illegible] ವುದಾದರೆ, ಕರ್ನಾಟಕದಲ್ಲಿ ಕೆಲವು ಫ್ಯಾಕ್ಟರಿಗಳನ್ನು ಕೊಂಡು ಹೋಗಬೇಕು ಎಂಬ [illegible] ನನಗೆ ನೆನಪಿದ್ದಹಾಗೆ, ಮೈಷುಗರ್ ಫ್ಯಾಕ್ಟರಿ ಪಬ್ಲಿಕ್ ಸೆಕ್ಟಾರ್ ಕಂಪೆನಿಯಾಗಿದೆ. [illegible] ಸಹಕಾರೀಕರಣ ಮಾಡಬೇಕು. ಇದು ಮಂಡ್ಯ ರೈತರ ಬಹಳ ದಿನಗಳ ಬೇಡಿಕೆ. ಇವತ್ತು ಅದನ್ನು ಮಾಡಬೇಕು. ವಿಕೇಂದ್ರೀಕರಣದಲ್ಲಿ ನಂಬಿಕೆ ಇಟ್ಟವರು, ಜನಗಳಿಗೆ ಈ ಅಧಿಕಾರವನ್ನು ಕೊಡಬೇಕು, ಜನಗಳ ಹತ್ತಿರ ಹೋಗಬೇಕು ಎಂದು ಪಬ್ಲಿಕ್‌ದ ಸಿದ್ಧಾಂತ ಮಾಡುತ್ತೀರಿ. ಆದರೆ ಜನಗಳಿಂದಲೇ ಮೌಲ್ಯಗಳನ್ನು ಕಸಿಯತಕ್ಕ ಪ್ರಯತ್ನ, ಸರ್ಕಾರೀಕರಣ ಮಾಡಲಿಕ್ಕೆ ಹೊರಟಿದ್ದೀರಿ. ಇದು ರಾಷ್ಟ್ರೀಕರಣ ಅಲ್ಲ ಒಂದು ರೀತಿಯಲ್ಲಿ ಸರ್ಕಾರೀಕರಣ. ಒಂದು ಸಿದ್ಧಾಂತ ಹಿನ್ನೆಲೆಯಲ್ಲಿ ಇದನ್ನು ನಾವು ಸಂಪೂರ್ಣವಾಗಿ ವಿರೋಧ ಮಾಡಬೇಕಾಗುತ್ತದೆ. ಮಾನ್ಯ ಕೆ.ಹೆಚ್. ಪಾಟೀಲರು ಚೆನ್ನಾಗಿ ಹೇಳಿದರು. ಹಾಗಾದರೆ ಮುಂದೆ ಏನಾಗುತ್ತದೆ ? ರೈತರ ಪ್ರಶ್ನೆ ಬಂದಾಗ ಈ ಕೆಲಸ ತಾವು ಮಾಡುವುದಿಲ್ಲ. ತಮ್ಮ ಆದ್ಯತೆ ರೈತರ ಪರವಾಗಿ ಎಂದು ಹೇಳುತ್ತೀರಿ. ಗೌರಿಬಿದನೂರು ಷುಗರ್ ಫ್ಯಾಕ್ಟರಿಯವರು, ಕೊಳ್ಳೆಗಾಲ ಷುಗರ್ ಫ್ಯಾಕ್ಟರಿಯವರು, ಚುಂಚನಕಟ್ಟೆ ಫ್ಯಾಕ್ಟರಿಯವರು ಈ ಫ್ಯಾಕ್ಟರಿಗಳನ್ನು ಎಲ್ಲಾ ನೀವು ನಡೆಸಬೇಕು, ಅದಕ್ಕೆ ಸಹಾಯ ಮಾಡಬೇಕು ಎಂದು ಹೇಳಿದಾಗ ಅಲ್ಲಿಗೆ ಹಣ ಕೊಡಲಿಕ್ಕೆ ತಮ್ಮ ಹತ್ತಿರ ಹಣ ಇಲ್ಲ. ಅದನ್ನು ನಡೆಸಲಿಕ್ಕೆ ಏನು ಮಾಡಬೇಕು ? ಟೇಕ್‌ಓವರ್ ಮಾಡಿಕೊಂಡು ಅಡ್ಮಿನಿಸ್ಟ್ರೇಟರನ್ನು ಹಾಕಿ ನಡೆಸಲಿಕ್ಕೆ ಹಣ ಇಲ್ಲ, ರೈತರ ಬೇಡಿಕೆಗೆ

ಆದ್ಯತೆ ಇಲ್ಲ. ಆದರೆ ಇಲ್ಲಿ ಸಹಕಾರ ರಂಗಕ್ಕೆ ಅದನ್ನು ಕೊಟ್ಟು ಅದರಿಂದ ನಡೆಸಿಕೊಳ್ಳತಕ್ಕ ಪ್ರಯತ್ನ ಮಾಡಿದೆ. ಅದನ್ನು ಸರ್ಕಾರೀಕರಣ ಮಾಡತಕ್ಕಂಥ ಪ್ರಯತ್ನವನ್ನು ತಾವು ಮಾಡುತ್ತಿದ್ದೀರಿ. ನನಗನ್ನಿಸುತ್ತದೆ, ತಾವು ಮನಸ್ಸಿದ್ದು ಖಂಡಿತವಾಗಿಯೂ ಮನಸಿದ್ದು ಇದನ್ನು ಮಾಡಿದ್ದೀರಾ ? ನಾನು ತಿಳಿದುಕೊಂಡ ಹಾಗೆ ಮಾನ್ಯ ಜಿ.ಹೆಚ್. ಪಟೇಲರು ಒಪ್ಪಿಗೆ ಕೊಡುವುದಿಲ್ಲ, ಯಾರದೋ ಒತ್ತಾಯಕ್ಕೆ ಮಾಡುತ್ತಿದ್ದಾರಿ. ಮಂತ್ರಿಮಂಡಲದಲ್ಲಿ ಒತ್ತಾಯ ಬಂದಿದೆಯೇ. ಯಾರೂ ಒತ್ತಾಯ ಮಾಡಲಿಕ್ಕಿಲ್ಲ. ಕಾರ್ಮಿಕರ ಪರವಾಗಿ ಮಾಡುತ್ತಿದ್ದೀರೋ ಎಂದರೆ ಅದೂ ಸರಿಯಿಲ್ಲ. ಆದರೆ ಸಹಕಾರ ರಂಗಕ್ಕೆ ಕೊಡಿ. ಅಡ್ಮಿನಿಸ್ಟ್ರೇಟರನ್ನು ಅಪಾಯಿಂಟ್ ಮಾಡಿಕೊಂಡು ಕೋ-ಆಪರೇಟಿವ್ ಸೆಕ್ಟಾರಿನಲ್ಲಿ ಇದನ್ನು ನಡೆಸಿ. ಅಡ್ಮಿನಿಸ್ಟ್ರೇಟರನ್ನು ಹಾಕಿ ಕೋ-ಆಪರೇಟಿವ್ ಸೆಕ್ಟಾರಿನಲ್ಲಿ ನಡೆಸಲಿಕ್ಕೆ ಏನು ತೊಂದರೆ? ಇದರ ಬಗ್ಗೆ ತಾವು ಸ್ವಲ್ಪ ಆಲೋಚನೆ ಮಾಡಬೇಕು. ಅಡ್ಮಿನಿಸ್ಟ್ರೇಟರನ್ನು ಹಾಕಿ ಕೋ-ಆಪರೇಟಿವ್ ಸೆಕ್ಟಾರಿನಲ್ಲಿ ಮಾಡಿ. ತಾವು ಮಾಲೀಕರಿಗೆ ಸಹಾಯ ಮಾಡುವುದಕ್ಕೋಸ್ಕರ ಮಾಡುತ್ತಾ ಇಲ್ಲ ಎಂದು ನನಗನ್ನಿಸುತ್ತದೆ. ಆದರೆ ಈ ಬಿಲ್ಲಿನಲ್ಲಿ ಇದನ್ನು ರಾಷ್ಟ್ರೀಕರಣ ಅಥವಾ ಸರ್ಕಾರೀಕರಣ ಮಾಡುವುದರಿಂದ ಯಾರು ಗುತ್ತಿಗೆದಾರರು ಇದ್ದರು ಅವರಿಗೆ ನೀವು ಹೆಚ್ಚು ಕಾಂಪನ್ಸೇಷನ್ ಪರಿಹಾರ ಕೊಡಬೇಕಾಗುತ್ತದೆ. ಇದರಿಂದ ಈ ಪರಿಸ್ಥಿತಿ ಉದ್ಭವ ವಾಗುತ್ತದೆ. ಆದುದರಿಂದ ಇದು ಏನು ಅಗತ್ಯವಿತ್ತು ? ಈ ರೀತಿ ತೆಗೆದುಕೊಂಡು ಹೋಗ ಬೇಕಾದ ಅವಶ್ಯಕತೆ ಏನಿತ್ತು ? ಅವಶ್ಯಕತೆ ಇಲ್ಲದೇಹೋದರೆ ಸಿಕ್ ಯೂನಿಟ್, ಅಂಡರ್‌ಟೇಕಿಂಗ್ಸ್ ಏನಿದೆ, ಆ ಕಾನೂನು ಪ್ರಕಾರ ಕೂಡ ಇಲ್ಲ, ಎನ್.ಟಿ.ಸಿ.ಯವರನ್ನು ಕೇಳಿಕೊಂಡಿದ್ದರು, ಅವರು ತೆಗೆದುಕೊಂಡಿಲ್ಲ, ಅವರು ಏಕೆ ತೆಗೆದುಕೊಂಡಿಲ್ಲ ಎನ್ನುವುದನ್ನು ನಮ್ಮ ಅನುಭವಕ್ಕೆ ತನ್ನಿ. You will be enlightening the House. ಮೈಕೋಪನ್ನು ತೆಗೆದುಕೊಳ್ಳಲಿಕ್ಕೆ ನಾವು ಆಕ್ಟ್ ಮಾಡಿದೆವು. ಆದರ ಪ್ರಕಾರ ಕೂಡ ಇಲ್ಲ. ಮೈಕೊ ಸಿಕ್ ಯೂನಿಟ್ ಎಂದು ನಾವು ಯಾವಾರೀತಿ ಮಾಡಿದ್ದೆವೋ ಅದರ ಪ್ರಕಾರ ಕೂಡ ಇಲ್ಲ. ಈ ರೀತಿ ಅವರ ಠೇವಣಿ ಹಣ ಳಳಟ ಲಕ್ಷ ರೂಪಾಯಿ ಗಳನ್ನು ಸರ್ಕಾರ ಅಮಾನತ್ತಿನಲ್ಲಿಡಬೇಕು. ಇದು ಏನು ಅಗತ್ಯ ಇತ್ತು ? ಗೌರಿಬಿದನೂರು ಷುಗರ್ ಫ್ಯಾಕ್ಟರಿ, ಕೊಳ್ಳೇಗಾಲ ಷುಗರ್ ಫ್ಯಾಕ್ಟರಿಗಳಿಗೆ ೫೦-೫೦ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದರೆ, ಆ ಫ್ಯಾಕ್ಟರಿಗಳೂ ನಡೆಯುತ್ತಿದ್ದವು. ಹಿರಿಯೂರು ಷುಗರ್ ಫ್ಯಾಕ್ಟರಿ ಇತ್ತು, ಬೇರೆ ಅನೇಕ ಸಕ್ಕರೆ ಕಾರ್ಖಾನೆಗಳು ಇದ್ದವು. ರೋಗ ಗ್ರಸ್ಥ ಸಾರ್ವಜನಿಕ ಉದ್ದಿಮೆಗಳು ಇದ್ದವು, ಲೋ-ಪರ್ಸೆಂಟ್ ಪ್ರೊಡಕ್ಷನ್ ಇರತಕ್ಕ ಉದ್ದಿಮೆಗಳು ಇದ್ದವು. ಅಲ್ಲಿ ಈಗ ಜನಗಳಿಗೆ ಕೆಲಸ ಸಿಕ್ಕುತ್ತಾ ಇಲ್ಲ. ಅಲ್ಲಿಯೂ ಕಾರ್ಮಿಕರು ಇಲ್ಲವೇ ? ಗಿರಣಿ ಇದ್ದು, ಕಾರ್ಮಿಕರ ಬಗ್ಗೆ ವಿಶೇಷವಾದ ಆಸಕ್ತಿ ತೋರಿಸಿ, ಈ ರೀತಿ ಮಾಡಬೇಕಾಗಿಲ್ಲ. ಸಹಕಾರಿ ರಂಗದಲ್ಲಿ ಅಡ್ಮಿನಿಸ್ಟ್ರೇಟರ್ ಮುಖಾಂತರ, ಇದಕ್ಕೆ ಹಣ ಕೊಟ್ಟು ನಡೆಸಿಕೊಂಡು ಹೋಗುವ ಸಾಧ್ಯತೆ ಇರುವಾಗ, ಳಳಟ.೫೯ ಲಕ್ಷ ರೂಪಾಯಿಗಳ ಠೇವಣಿ ಇಡುವ ಅಗತ್ಯ ಏನು ? ನಿಮ್ಮ ಆರ್ಥಿಕ ಜ್ಞಾಪನಾ ಪತ್ರವನ್ನು ಓದಿ ಹೇಳುತ್ತೇನೆ. ನೀವು ಈ ಬಗ್ಗೆ ವಿವರಣೆ ಕೊಡುವುದಕ್ಕಾಗುವುದಿಲ್ಲ. ಈ ವಿಧೇಯಕದ ಮೂರನೇ ಅಧ್ಯಾಯದ ೯ನೇ ಕಂಡಿಕೆಗನುಸಾರವಾಗಿ.

> ''ಸರ್ಕಾರವು ಳಳಟ.೫೯ ಲಕ್ಷ ರೂಪಾಯಿಗಳನ್ನು ಕಮಿಷನರಲ್ಲಿ ಠೇವಣಿ ಇಟ್ಟು, ಸಂದಾಯ ಮಾಡತಕ್ಕದ್ದು ಮತ್ತು ಸದರಿ ಮೊಬಲಗನ್ನು ೫ನೇ ಅಧ್ಯಾಯದಲ್ಲಿ ನಿರ್ದಿಷ್ಟ ಪಡಿಸಿರುವ ರೀತಿಯಲ್ಲಿ, ಗುತ್ತಿಗೆಗೆ ಕೊಡುವವನು ಗುತ್ತಿಗೆದಾರ ಅಥವಾ ಅದಕ್ಕೆ ಹಕ್ಕುಳ್ಳ ಅಂಥ ಇತರ ವ್ಯಕ್ತಿಗಳಿಗೆ ಸಂದಾಯ ಮಾಡತಕ್ಕದ್ದು.''

ಎಂದು ಹೇಳಿದ್ದೀರಿ. ಇದು ಕಾರ್ಮಿಕರಿಗೆ ಪರಿಹಾರ ಕೊಡುವುದಕ್ಕಾದರೆ ಒಪ್ಪುತ್ತೇನೆ, ಆ ರೀತಿ ಮಾಡಿಲ್ಲ. ಕಾರ್ಮಿಕರಿಗೆ ಳಳಟ.೫೯ ಲಕ್ಷ ರೂಪಾಯಿಗಳನ್ನು ಕೊಡುವುದಕ್ಕೆ ಮಸೂದೆಯಲ್ಲಿ ಏನಾದರೂ ಕಾಣಿಸಿದ್ದರೆ ನಾನು ಒಪ್ಪುತ್ತೇನೆ. ಆದರೆ ನೀವು ಯಾರಿಗೆ ಕೊಡುತ್ತಿದ್ದೀರಿ, ಎಂದರೆ ಯಾರು ಈ ಉದ್ದಿಮೆಗಳನ್ನು ನಾಶ ಮಾಡಿದ್ದಾರೋ, ಯಾರು ಈ ಉದ್ದಿಮೆಗಳನ್ನು ಶೋಷಣೆ ಮಾಡುತ್ತಿದ್ದಾರೋ, ಅವರಿಗೆ ಕೊಡುತ್ತಿದ್ದೀರಿ. ಇಷ್ಟು ಮಾಡತಕ್ಕಂಥ ಅವಶ್ಯಕತೆ ಇಲ್ಲ. ಒಂದನೆಯದಾಗಿ ಸಿದ್ಧಾಂತದ ಪ್ರಕಾರ, ಸಹಕಾರಿ ರಂಗ, ಸರ್ಕಾರೀಕರಣ ಮಾಡುವಂತಹ ಕೆಲಸ ಆಗಿದ್ದರೆ ನಾವು ಶ್ಲಾಘನೆ ಮಾಡಬೇಕಾಗಿತ್ತು. ತಾವು ಸ್ವಲ್ಪ ಆಲೋಚನೆ ಮಾಡಿ. ತಾವು ಇದನ್ನು ಹಿಂದಕ್ಕೆ ತೆಗೆದುಕೊಂಡು ವಿಚಾರ ಮಾಡಿ. ಪ್ರಸ್ತಾವನಾ ಭಾಷಣ ಕೂಡ ಯಾರೂ ಮಾಡಲಿಲ್ಲ.

ಇದನ್ನು ಓದಿದಾಗ ಬಹಳ ಗೊಂದಲಕ್ಕೆ ಕಾರಣವಾಗುತ್ತದೆ. ಆದ್ದರಿಂದ, ಅಧ್ಯಕ್ಷರೇ ಇದನ್ನು ಹೆಡಿಂಗ್ ಇಡುವುದು.

SRI K.H. PATIL.—It is well and good even if you make Sri S.R. Bommai ex-officio chairman and continue that society and make it beneficial to co-operators.

ಶ್ರೀ ಎಂ. ವೀರಪ್ಪ ಮೊಯಿಲಿ.—ಇವೊತ್ತು ಏನಾಗಿದೆ ಎಂದರೆ, ಈ ಬಿಲ್ಲನ್ನು ಓದಿದರೆ, ಇದರ ಬಗ್ಗೆ ಸರ್ಕಾರಕ್ಕೆ ಇರುವ ಕಾಳಜಿ ಅರ್ಥವಾಗುತ್ತಿಲ್ಲ. ಈ ಬಿಲ್ ಕನ್ನಡದಲ್ಲಿದೆ. ಕನ್ನಡದಲ್ಲಿ ಬಿಲ್ ಇದ್ದರೆ, ಅಭ್ಯಾಸ ಮಾಡುವುದು ಸ್ವಲ್ಪ ಕಷ್ಟ. ಇಂಗ್ಲೀಷ್‌ನಲ್ಲಿ ಪ್ರಿಂಟ್ ಆಗಿಲ್ಲ. ಇದು ನೋಡಿದಾಗ ಗೊಂದಲ ಇದೆ. ಗೊಜಲು ಇದೆ. ಯಾರಿಗೆ ಸಹಾಯ ಮಾಡುವುದಕ್ಕೆ ಈ ಬಿಲ್ ಮಾಡಿದ್ದೀರಿ, ಇದು ಅಷ್ಟು ಸಲೀಸಾಗಿ ಉಪಯೋಗ ಆಗತಕ್ಕ ಬಿಲ್ ಅಲ್ಲ. ಇಂದು ೧೨-೩೦ಕ್ಕೆ ನಾನ್ ಅಫಿಷಿಯಲ್ ಬಿಸಿನೆಸ್ ಮೂವ್ ಆಗಬೇಕಾಗುತ್ತದೆ. ಇದು ಸ್ವಲ್ಪ ಎಲ್ಲಾ ಸದಸ್ಯರೂ ಓದಿಕೊಂಡು ಮಾತನಾಡಬೇಕಾಗುತ್ತದೆ. ಮಾನ್ಯ ಎಂ. ಎಸ್. ಕೃಷ್ಣಸ್ವಾಮಿಯವರೂ ಮಾತನಾಡುತ್ತಾರೆ. ಬೇರೆ ಸದಸ್ಯರೂ ಮಾತನಾಡುತ್ತಾರೆ. ಆದ್ದರಿಂದ ಇದನ್ನು ಇನ್ನೊಂದು ದಿವಸ ತೆಗೆದುಕೊಳ್ಳೋಣ. I may take sometime to deal with this Bill. Let us first understand the nature of the Bill. We would like to hear the background so that they can draw a light on it or else let them circulate a note because it is a quite unique bill. If you can supply the background it is well and good.

ಅಧ್ಯಕ್ಷರು.—ಮಾನ್ಯ ಬೊಮ್ಮಾಯಿಯವರು ಏನು ಹೇಳುತ್ತಾರೆ ಸ್ವಲ್ಪ ಕೇಳಿ.

ಶ್ರೀ ಎಸ್.ಆರ್. ಬೊಮ್ಮಾಯಿ.—ಈ ಬಿಲ್ ಏನಿದೆ, ಇದು ವಿತರಿಸ್ಪವಾಗುದು ಎನ್ನುವ ಮಾತನ್ನು ನಾನು ಒಪ್ಪಿಕೊಳ್ಳುತ್ತೇನೆ. ನಿನ್ನೆ ಉತ್ತರ ಕೊಡುವಾಗ ಲೇಬರ್ ಪ್ರಾಬ್ಲಮ್ ಮೇಲೆ ಮಾನ್ಯ ಕೃಷ್ಣಸ್ವಾಮಿಯವರೂ ಕೇಳಿದರು. ಇದು ಸಮಗ್ರವಾದ ಬಿಲ್. ಈ ಬಿಲ್ಲನ್ನು ಆಲೋಚನೆ ಮಾಡಿದಾಗ, ಅತ್ಯಂತ ಕ್ರಾಂತಿಕಾರಕವಾದ ಕಾನೂನು ಇದೆ. ಈ ಸಹಕಾರಿ ಮಿಲ್ಲುಗಳ ಇತಿಹಾಸ ಬಹಳ ದೊಡ್ಡದಿದೆ. ಸಹಕಾರಿ ಮಿಲ್ಲುಗಳಲ್ಲಿ ಎಷ್ಟು ಹಣ ಇದೆ, ಎಷ್ಟು ಹಣ ಹೋಗಿದೆ, ಸರ್ಕಾರಕ್ಕೆ ಎಷ್ಟು ಕೊಡಬೇಕು, ಷೇರು ಹೋಲ್ಡರ್ಸ್ ಹಣ, ಇವೆಲ್ಲಾ ಬೇರೆ ವಿಚಾರ. ಈ ಮಸೂದೆ ತರತಕ್ಕ ಉದ್ದೇಶ ಮತ್ತು ಅಗತ್ಯ ಎರಡೂ ಸ್ಪಷ್ಟವಾಗಿವೆ. ಮೊದಲನೆಯದಾಗಿ ರಿಲೀಫ್ ಅಂಡರ್ ಟೇಕಿಂಗ್ಸ್ ಕೆಳಗಡೆ ಸರ್ಕಾರ ಇದನ್ನು ತೆಗೆದುಕೊಂಡಿತ್ತು. ಇದನ್ನು ಒಂದೊಂದು ವರ್ಷ ಮುಂದುವರಿಸಿಕೊಂಡು ಹೋಗತಕ್ಕಂಥ ಪರಿಸ್ಥಿತಿ ಬಂತು. ಇದಕ್ಕೆ ಕೇಂದ್ರ ಸರ್ಕಾರದ ಅನುಮತಿ ಬೇಕಾಗುತ್ತದೆ, ಆದ್ದರಿಂದ ಇದು ಸ್ವಲ್ಪ ಕಷ್ಟವಾಗುತ್ತದೆ.

ಶ್ರೀ ಕೆ. ಹೆಚ್. ಪಾಟೀಲ್.—ಈ ಬಿಲ್ಲಿನ ಬಗ್ಗೆ ಬಹಳ ಕಾಂಟ್ರವರ್ಸಿ ಇದೆ. ಮಾನ್ಯ ಜೆ.ಹೆಚ್. ಪಟೀಲರೂ ಮಾತನಾಡಲೀ, ಮಾನ್ಯ ಜಾಲಪ್ಪನವರೂ ಮಾತನಾಡಲಿ. ಇದು ಪ್ರಗತಿಪರ ಎಂದು ಹೇಳಿದರೆ ಆಮೇಲೆ ಪರಿಶೀಲನೆ ಮಾಡೋಣ. ಈಗ ಇದನ್ನು ಮುಂದಕ್ಕೆ ಹಾಕುವುದು ಸೂಕ್ತ.

ಶ್ರೀ ಜೆ.ಹೆಚ್. ಪಟೀಲ್.—ಸೋಮವಾರ ತೆಗೆದುಕೊಳ್ಳುವುದಾದರೆ ನನ್ನದೇನೂ ಅಭ್ಯಂತರ ಇಲ್ಲ.

ಅಧ್ಯಕ್ಷರು.—ಎ.ಪಿ.ಎಂ.ಸಿ. ಬಿಲ್ಲಿಗೆ ಏನೂ ಆಡ್ಜಸ್ಟ್ ಇಲ್ಲವೇ ?

ಶ್ರೀ ಕೆ.ಹೆಚ್. ಪಾಟೀಲ್.—ಅದು ತೆಗೆದುಕೊಳ್ಳಬಹುದು.

ಅಧ್ಯಕ್ಷರು.—ಈಗ ಎ.ಪಿ.ಎಂ.ಸಿ. ಬಿಲ್ ತೆಗೆದುಕೊಳ್ಳೋಣ.